# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : **2474**
**ಸದಸ್ಯರ ಹೆಸರು** : **ಶ್ರೀ ಎಂ.ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**
**ಉತ್ತರಿಸಬೇಕಾದ ದಿನಾಂಕ** : **23-03-2022**
**ಉತ್ತರಿಸುವ ಸಚಿವರು** : **ಕಂದಾಯ ಸಚಿವರು**

| ಪ್ರಶ್ನೆ | ಉತ್ತರ |
|---|---|
| **(ಅ)** ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ 2019 ರಿಂದ ಇಲ್ಲಿಯವರೆಗೂ ಬರ ಪರಿಹಾರ ಯೋಜನೆಯಲ್ಲಿ ಬಿಡುಗಡೆಯಾಗಿರುವ ಅನುದಾನ ಎಷ್ಟು; ಅದರಲ್ಲಿ ರಾಜ್ಯದ ಹಾಗೂ ಕೇಂದ್ರ ಸರ್ಕಾರದ ಪಾಲೇಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು) | ಕೋಲಾರ ಜಿಲ್ಲೆಗೆ ಸಂಬಂಧಿಸಿದಂತೆ<br>• 2019-20ನೇ ಸಾಲಿನಲ್ಲಿ ಸರ್ಕಾರವು ಕೋಲಾರ ಜಿಲ್ಲೆಯನ್ನು ಬರ ಪೀಡಿತ ಜಿಲ್ಲೆಯೆಂದು ಘೋಷಿಸಿದ್ದು, ರೂ.10.00ಕೋಟಿ ಅನುದಾನವನ್ನು ಬರ ಪರಿಹಾರ ಕಾರ್ಯಗಳಿಗೆ ಬಿಡುಗಡೆ ಮಾಡಲಾಗಿರುತ್ತದೆ.<br>• 2020-21 ಮತ್ತು 2021-22ನೇ ಸಾಲಿನಲ್ಲಿ ಕೋಲಾರ ಜಿಲ್ಲೆಯನ್ನು ಬರಪೀಡಿತ ಜಿಲ್ಲೆಯೆಂದು ಘೋಷಿಸಿರುವುದಿಲ್ಲವಾದ್ದರಿಂದ ಯಾವುದೇ ಅನುದಾನವು ಬಿಡುಗಡೆ ಮಾಡಿರುವುದಿಲ್ಲ.<br><br>ಚಿಕ್ಕಬಳ್ಳಾಪುರ ಜಿಲ್ಲೆಗೆ ಸಂಬಂಧಿಸಿದಂತೆ<br>• 2019-20ನೇ ಸಾಲಿನಲ್ಲಿ 3 ತಾಲ್ಲೂಕು (ಚಿಂತಾಮಣಿ, ಗುಡಿಬಂಡೆ, ಬಾಗೇಪಲ್ಲಿ) ಬರ ಪೀಡಿತ ಪ್ರದೇಶವೆಂದು ಘೋಷಣೆಯಾಗಿರುತ್ತದೆ.<br>• 2020-21 ಮತ್ತು 2021-22ನೇ ಸಾಲಿನಲ್ಲಿ ಯಾವುದೇ ತಾಲ್ಲೂಕು ಬರ ಪೀಡಿತ ಪ್ರದೇಶವೆಂದು ಘೋಷಣೆಯಾಗಿರುವುದಿಲ್ಲ.<br>ಬರ ನಿರ್ವಹಣೆಗೆ ಪ್ರತ್ಯೇಕವಾಗಿ ಅನುದಾನ ಬಿಡುಗಡೆಯಾಗಿರುವುದಿಲ್ಲ. ಬರ ಘೋಷಣೆಯಾದ ತಾಲ್ಲೂಕುಗಳ ನಿರ್ವಹಣೆಗಾಗಿ ಜಿಲ್ಲೆಯ ಪ್ರಕೃತಿ ವಿಕೋಪ ಶಾಖೆಯ ಪಿ.ಡಿ. ಖಾತೆಯಲ್ಲಿ ಲಭ್ಯವಿರುವ ಅನುದಾನದಡಿಯಲ್ಲಿ ಬಳಸಿಕೊಂಡು ಬರ ನಿರ್ವಹಣೆ ಮಾಡಲಾಗಿರುತ್ತದೆ. |
| **(ಆ)** ಈ ಅನುದಾನದಲ್ಲಿ ಕೈಗೊಂಡ ಕಾರ್ಯಕ್ರಮಗಳೇನು; (ವಿವರ ನೀಡುವುದು) | 2019-20ನೇ ಸಾಲಿನಲ್ಲಿ ಬಿಡುಗಡೆ ಮಾಡಲಾದ ಅನುದಾನದಲ್ಲಿ ಕುಡಿಯುವ ನೀರಿನ ತುರ್ತು ಕಾಮಗಾರಿಗಳಾದ ಕೊಳವೆ ಬಾವಿ, ಮರು ಆಳಗೊಳಿಸುವುದು, ಪೈಪ್‌ಲೈನ್ ಅಳವಡಿಕೆ, ಕೊರೆಯಲಾಗಿರುವ ಕೊಳವೆ ಬಾವಿಗಳಿಗೆ ಮೋಟಾರು ಅಳವಡಿಸುವುದು ಸಮಸ್ಯಾತ್ಮಕ ಗ್ರಾಮಗಳು/ ನಗರ/ ಪಟ್ಟಣ ಪ್ರದೇಶಗಳಲ್ಲಿ ಕುಡಿಯುವ ನೀರನ್ನು ಖಾಸಗಿ ಟ್ಯಾಂಕರ್ ಮತ್ತು ಪೈಪ್‌ಲೈನ್ ಮೂಲಕ ಸರಬರಾಜು ಮಾಡಲು ಮತ್ತು ಜಾನುವಾರು ಮೇವು ಬೆಳೆಯಲು ಮಿನಿಕಿಟ್, ಗೋಶಾಲೆ ನಿರ್ವಹಣೆ ಹಾಗೂ ಜಾನುವಾರು ಮೆಡಿಕಲ್ ಕ್ಯಾಂಪ್ ನಿರ್ವಹಣೆಯಂತಹ ಪರಿಹಾರ ಕಾರ್ಯಗಳನ್ನು ಕೈಗೊಳ್ಳಲಾಗಿರುತ್ತದೆ. |

| | |
|---|---|
| **(ಇ)** ಸದರಿ ಅನುದಾನವನ್ನು ಯಾವ ಯಾವ ಯೋಜನೆಗಳಿಗೆ ಬಳಸಲಾಗಿದೆ; (ಖರ್ಚಾಗಿರುವ ಅನುದಾದ ವಿವರ ನೀಡುವುದು) | ಕೋಲಾರ ಜಿಲ್ಲೆಯಲ್ಲಿ, ಬಳಕೆಯಾದ ಅನುದಾನದ ವಿವರ:<br>1) ಕುಡಿಯುವ ನೀರಿನ ದುರಸ್ಥಿ ಕಾಮಗಾರಿಗೆ ರೂ.166.00ಲಕ್ಷ<br>2) ಸಮಸ್ಯಾತ್ಮಕ ಗ್ರಾಮಗಳು/ನಗರ/ಪಟ್ಟಣ ಪ್ರದೇಶಗಳಲ್ಲಿ ಕುಡಿಯುವ ನೀರನ್ನು ಖಾಸಗಿ ಟ್ಯಾಂಕರ್ ಮತ್ತು ಪೈಪ್‌ಲೈನ್ ಮೂಲಕ ನೀರು ಸರಬರಾಜು ಮಾಡಲು ರೂ.436.00ಲಕ್ಷ<br>3) ಜಾನುವಾರು ಮೇವು ಬೆಳೆಯಲು ಮಿನಿಕಿಟ್ ಹಾಗೂ ಜಾನುವಾರು ಮೆಡಿಕಲ್ ಕ್ಯಾಂಪ್ ನಿರ್ವಹಣೆಗೆ ರೂ.56.00ಲಕ್ಷ<br><br>ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಬಳಕೆಯಾದ ಅನುದಾನದ ವಿವರ:<br>1) ಕುಡಿಯುವ ನೀರಿನ ದುರಸ್ಥಿ ಕಾಮಗಾರಿಗೆ ರೂ.1067.00ಲಕ್ಷ<br>2) ಸಮಸ್ಯಾತ್ಮಕ ನಗರ/ ಗ್ರಾಮಗಳಿಗೆ ಕುಡಿಯುವ ನೀರಿನ ವ್ಯವಸ್ಥೆಗೆ ರೂ.1096.00ಲಕ್ಷ<br>3) ಮೇವು ಬ್ಯಾಂಕ್ ನಿರ್ವಹಣೆಗೆ ರೂ.28.00ಲಕ್ಷ<br>4) ಗೋಶಾಲೆ ನಿರ್ವಹಣೆಗೆ ರೂ.39.00ಲಕ್ಷ |
| **(ಈ)** ಜಿಲ್ಲೆಗಳಲ್ಲಿ ಅನುದಾನ ಬಳಕೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;<br><br>**(ಉ)** ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು? | ಕೋಲಾರ ಜಿಲ್ಲೆಗೆ ಬಿಡುಗಡೆ ಮಾಡಲಾದ ಅನುದಾನದ ಪೈಕಿ ಉಳಿಕೆಯಾದ ರೂ.295.00ಲಕ್ಷಗಳನ್ನು ಸರ್ಕಾರದ ಆದೇಶದಂತೆ ಕೋವಿಡ್-19 ನಿಯಂತ್ರಣಕ್ಕಾಗಿ ಬಳಕೆ ಮಾಡಲಾಗಿರುತ್ತದೆ.<br><br>ಚಿಕ್ಕಬಳ್ಳಾಪುರ ಜಿಲ್ಲೆಗೆ ಸರ್ಕಾರದಿಂದ ಬರ ಪರಿಹಾರಕ್ಕಾಗಿ SDRFರಡಿ ಬಿಡುಗಡೆಯಾದ ಅನುದಾನ ಸಂಪೂರ್ಣವಾಗಿ ವೆಚ್ಚವಾಗಿದೆ. |

ಕಂಇ 131 ಟಿಎನ್‌ಆರ್ 2022

(ಆರ್. ಅಶೋಕ)
ಕಂದಾಯ ಸಚಿವರು